## ಕರ್ನಾಟಕ ಸರ್ಕಾರ

## ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:ಕಾಶಿಇ/11/ಸುತ್ತೋಲೆ/2018-19/ವಿವೇ

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ: 05.06.2018.

## ಸುತ್ತೋಲೆ

ವಿಷಯ : 2018-19ನೇ ಸಾಲಿನ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನಗಳನ್ನು ಸಕಾಲದಲ್ಲಿ ವಿತರಿಸುವ ಬಗ್ಗೆ.

ಉಲ್ಲೇಖ: ಸರ್ಕಾರದ ಅನುದಾನ ಬಿಡುಗಡೆ ಆದೇಶ ಸಂಖ್ಯೆ:ಇಡಿ/60/ಹೆಚ್‌ಪಿಸಿ/2018, ಬೆಂಗಳೂರು, ದಿ:09.04.2018.

*******

2018-19ನೇ ಸಾಲಿಗೆ ಈ ಇಲಾಖೆಯ ವಿವಿಧ ವಿದ್ಯಾರ್ಥಿವೇತನಗಳ ಪಾವತಿಗಾಗಿ ಕೆಳಕಂಡಂತೆ ಸರ್ಕಾರದಿಂದ ಅನುದಾನ ಒದಗಿಸಲಾಗಿರುತ್ತದೆ.

| ಕ್ರ. ಸಂ. | ವಿದ್ಯಾರ್ಥಿವೇತನದ ಹೆಸರು | ಲೆಕ್ಕಶೀರ್ಷಿಕೆ | 2018-19ನೇ ಸಾಲಿಗೆ ಹಂಚಿಕೆ ಆಗಿರುವ ಅನುದಾನ | ಷರಾ |
|---|---|---|---|---|
| 1 | 2 | 3 | 4 | 5 |
| 1 | ಸರ್.ಸಿ.ವಿ.ರಾಮನ್ ವಿದ್ಯಾರ್ಥಿವೇತನ | 2202-03-107-1-10-117 | ರೂ.600.00 ಲಕ್ಷಗಳು | ಪದವಿಯಲ್ಲಿ ಮೂಲ ವಿಜ್ಞಾನ ವ್ಯಾಸಂಗ ಮಾಡುವ ಅರ್ಹ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಾರ್ಷಿಕ ತಲಾ ರೂ.5000/- |
| 2 | ಸಂಚಿ ಹೊನ್ನಮ್ಮ ವಿದ್ಯಾರ್ಥಿವೇತನ | | | ಕಲಾ ಮತ್ತು ವಾಣಿಜ್ಯ ವಿಭಾಗದಲ್ಲಿ ಪದವಿ ವ್ಯಾಸಂಗ ಮಾಡುತ್ತಿರುವ ಅರ್ಹ ಪ್ರತಿಭಾವಂತಹ ವಿದ್ಯಾರ್ಥಿನಿಯರಿಗೆ ವಾರ್ಷಿಕ ತಲಾ ರೂ.2000/- |
| 3 | ಕಿತ್ತೂರು ರಾಣಿ ಚೆನ್ನಮ್ಮ ಪುರಸ್ಕಾರ | | | ತಾಂತ್ರಿಕ ಶಿಕ್ಷಣ ಹಾಗೂ ವೈದ್ಯಕೀಯ ಶಿಕ್ಷಣ ವ್ಯಾಸಂಗ ಮಾಡುವ ಅರ್ಹ ಪ್ರತಿಭಾವಂತ ವಿದ್ಯಾರ್ಥಿನಿಯರುಗಳಿಗೆ ಮಾತ್ರ. |
| 4 | ರಾಜೀವ್ ಗಾಂಧಿ ಸಾಲರೂಪದ ವಿದ್ಯಾರ್ಥಿವೇತನ | | | ಸರ್ಕಾರಿ ಹಾಗೂ ಅನುದಾನಿತ ಪದವಿ ಕಾಲೇಜುಗಳಲ್ಲಿ ಪದವಿ/ ಸ್ನಾತಕೋತ್ತರ ಪದವಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳು ರಾಜೀವ್ ಗಾಂಧಿ ಸಾಲರೂಪದ ವಿದ್ಯಾರ್ಥಿವೇತನ ಯೋಜನೆಯಡಿ ಪಡೆದ ಸಾಲಗಳಿಗೆ ಬಡ್ಡಿ ಸಬ್ಸಿಡಿ ಮಂಜೂರು ಮಾಡುವುದು. |
| 5 | ಹೆಚ್‌ಐವಿ/ಲೆಪ್ರಸಿ ವಿದ್ಯಾರ್ಥಿವೇತನ | | | ಹೆಚ್‌ಐವಿ ಅಥವಾ ಕುಷ್ಟರೋಗ ಪೀಡಿತರಿಗೆ ಅಥವಾ ಸದರಿ ರೋಗ ಪೀಡಿತರ ಮಕ್ಕಳಿಗೆ ಉಚಿತ ಶಿಕ್ಷಣ ಮತ್ತು ಶಿಷ್ಯವೇತನದಡಿ ಸರ್ಕಾರಿ/ಅನುದಾನಿತ/ಅನುದಾನರಹಿತ ಪದವಿ ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಮಂಜೂರು ಮಾಡುವುದು. |

| | | | | |
|---|---|---|---|---|
| 6 | ಸೈನಿಕ ಸಿಬ್ಬಂದಿ ಮಕ್ಕಳ & ಎಸ್.ಸಿ./ ಎಸ್.ಟಿ ವಿದ್ಯಾರ್ಥಿವೇತನ | 2202-03-107-1-07-117 | ರೂ.10.00 ಲಕ್ಷಗಳು | ಸೈನಿಕ ಸಿಬ್ಬಂದಿ ಮಕ್ಕಳ ಪದವಿ ವ್ಯಾಸಂಗಕ್ಕೆ ಬೋಧನಾ ಶುಲ್ಕ ಮರುಪಾವತಿ. |
| 7 | ಆಂಗ್ಲೋ ಇಂಡಿಯನ್ ವಿದ್ಯಾರ್ಥಿವೇತನ | 2202-03-103-2-01-059 | ಅಗತ್ಯ ಅನುದಾನ ಒದಗಿಸಲಾಗುವುದು. | ಆಂಗ್ಲೋ ಇಂಡಿಯನ್ ವಿದ್ಯಾರ್ಥಿಗಳ ಪದವಿ ವ್ಯಾಸಂಗದ ಶುಲ್ಕ ಮರುಪಾವತಿ |
| 8 | ಕನ್ನಡ, ಸಂಸ್ಕೃತ, ಆಂಗ್ಲ ಐಚ್ಛಿಕ ಭಾಷಾ ವಿದ್ಯಾರ್ಥಿವೇತನ | 2202-03-103-2-01-117 | ರೂ.01.00 ಲಕ್ಷಗಳು | ಪದವಿ ಮಟ್ಟದಲ್ಲಿ ಐಚ್ಛಿಕ ಭಾಷೆ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಮಂಜೂರು ಮಾಡುವುದು. |
| 9 | ಜೆ.ಎನ್.ಯು ವಿದ್ಯಾರ್ಥಿವೇತನ | 2202-03-103-2-01-117 | ರೂ.01.00 ಲಕ್ಷಗಳು | ಈ ರಾಜ್ಯದಿಂದ ನವದೆಹಲಿಯ ಜವಹರಲಾಲ್ ನೆಹರು ವಿಶ್ವವಿದ್ಯಾಲಯದಲ್ಲಿ ಎಂ.ಫಿಲ್/ ಪಿ.ಹೆಚ್‌ಡಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಮಾತ್ರ. |

ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರುಗಳು ತಮ್ಮ ಕಛೇರಿ ಆಡಳಿತ ವ್ಯಾಪ್ತಿಗೊಳಪಡುವ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು ಮತ್ತು ಖಾಸಗಿ ಅನುದಾನಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಸದರಿ ವಿದ್ಯಾರ್ಥಿವೇತನಗಳ ಬಗ್ಗೆ ಸುತ್ತೋಲೆ ಹೊರಡಿಸಿ ಅರ್ಹ ಫಲಾನುಭವಿ ವಿದ್ಯಾರ್ಥಿಗಳಿಗೆ ಸೂಕ್ತ ವಿದ್ಯಾರ್ಥಿವೇತನ ದೊರೆಯುವಂತೆ ಕ್ರಮಕೈಗೊಳ್ಳಲು ತಿಳಿಸುವುದು. 2018-19ನೇ ಸಾಲಿನಲ್ಲಿ ವಿದ್ಯಾರ್ಥಿಗಳು ಪ್ರವೇಶ ಪಡೆಯುವ ಸಂದರ್ಭದಲ್ಲಿ ಅಥವಾ ಪ್ರವೇಶ ಪಡೆಯುವ ದಿನದಂದೇ ಪ್ರಾಂಶುಪಾಲರುಗಳು ವಿದ್ಯಾರ್ಥಿಗಳಿಗೆ ಅರ್ಹವಾದ/ಲಭ್ಯವಿರುವ ವಿದ್ಯಾರ್ಥಿವೇತನಗಳ ಮಾಹಿತಿ ನೀಡುವುದು. ಹಾಗೂ ಕ್ರ.ಸಂ.1, 2, 6, 7 ರಲ್ಲಿನ ವಿದ್ಯಾರ್ಥಿವೇತನಗಳಿಗೆ ಅರ್ಹ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಪಡೆದು ದೃಢೀಕರಿಸಿ ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿಗೆ ಸಲ್ಲಿಸುವುದು. ಹಾಗೂ ಪ್ರಾದೇಶಿಕ ಜಂಟಿ ನಿರ್ದೇಶಕರಗಳು ಪ್ರಾಂಶುಪಾಲರುಗಳಿಂದ ಸಲ್ಲಿಕೆಯಾಗುವ ಅರ್ಜಿಗಳನ್ನು ಪರಿಶೀಲಿಸಿ ಅರ್ಹ ವಿದ್ಯಾರ್ಥಿಗಳ ಪಟ್ಟಿ ತಯಾರಿಸಿ ಸರ್.ಸಿ.ವಿ.ರಾಮನ್ ವಿದ್ಯಾರ್ಥಿವೇತನ, ಸಂಚಿ ಹೊನ್ನಮ್ಮ ವಿದ್ಯಾರ್ಥಿವೇತನ, ಸೈನಿಕ ಸಿಬ್ಬಂದಿ ಮಕ್ಕಳ ವಿದ್ಯಾರ್ಥಿವೇತನ ಮತ್ತು ಆಂಗ್ಲೋ ಇಂಡಿಯನ್ ನೂತನ ವಿದ್ಯಾರ್ಥಿವೇತನಗಳಿಗೆ ಅಗತ್ಯವಾದ ಅನುದಾನಗಳ ಕೋರಿಕೆಯನ್ನು ಆಗಸ್ಟ್ 16ರೊಳಗೆ ಈ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ.

1ನೇ ಕಂತಿನ ಅನುದಾನವು ಸರ್ಕಾರದಿಂದ ಈಗಾಗಲೇ ಬಿಡುಗಡೆಯಾಗಿದ್ದು, ನವೀಕರಣ ವಿದ್ಯಾರ್ಥಿವೇತನಕ್ಕೆ ಅಗತ್ಯವಿರುವ ಅನುದಾನಕ್ಕೆ ಕೋರಿಕೆಯನ್ನು ತಾವು ಸಲ್ಲಿಸುವ ಕೋರಿಕೆಯ ಆಧಾರದ ಮೇಲೆ ತಮಗೆ ಬಿಡುಗಡೆ ಮಾಡುವ ಅನುದಾನಗಳನ್ನು ಮೊದಲಿಗೆ ನವೀಕರಣ ವಿದ್ಯಾರ್ಥಿವೇತನಕ್ಕೆ ಬಳಸಲು ಆದ್ಯತೆ ನೀಡುವುದು. ಸದರಿ ಮೊತ್ತದಲ್ಲಿ ಅನುದಾನ ಉಳಿಕೆಯಾದಲ್ಲಿ ನೂತನ ವಿದ್ಯಾರ್ಥಿವೇತನಕ್ಕೆ ವೆಚ್ಚಮಾಡುವುದು. ಹಾಗೂ ನವೀಕರಣ ವಿದ್ಯಾರ್ಥಿವೇತನ ಪಾವತಿಗೆ ಚಾಲ್ತಿಯಲ್ಲಿರುವ ನಿಯಮಗಳನ್ನು ಕಡ್ಡಾಯವಾಗಿ ಪರಿಶೀಲಿಸಿ ಕ್ರಮಕ್ಕೈಗೊಳ್ಳುವುದು.

ಹಾಗೂ ಸದರಿ ವಿದ್ಯಾರ್ಥಿವೇತನಗಳನ್ನು ಖಜಾನೆ-2 ರಲ್ಲಿ ಅರ್ಹ ಫಲಾನುಭವಿ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ಸಕಾಲದಲ್ಲಿ ಬಿಡುಗಡೆ ಮಾಡುವುದು. ಮುಂದಿನ ಕಂತಿನ ಕೋರಿಕೆ ಸಲ್ಲಿಸುವ ಪೂರ್ವದಲ್ಲಿ ಈ ಹಿಂದೆ ಬಿಡುಗಡೆಗೊಳಿಸಲಾಗುವ ಅನುದಾನದ ಬಳಕೆ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸುವುದು.

**(ಕರಡು ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)**

**ಕಾಲೇಜು ಶಿಕ್ಷಣ ನಿರ್ದೇಶಕರು (ಪ್ರ)**

5/6/18

**ಇವರಿಗೆ :**

ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ

ಪ್ರತಿ :

ಎಲ್ಲಾ ಸರ್ಕಾರಿ/ಖಾಸಗಿ ಅನುದಾನಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ – ವೆಬ್‌ಸೈಟ್ ಮೂಲಕ

1ನೇ ಕಂತಿನ ಅನುದಾನವು ಸರ್ಕಾರದಿಂದ ಈಗಾಗಲೇ ಬಿಡುಗಡೆಯಾಗಿದ್ದು, ನವೀಕರಣ ವಿದ್ಯಾರ್ಥಿವೇತನಕ್ಕೆ ಅಗತ್ಯವಿರುವ ಅನುದಾನಕ್ಕೆ ಕೋರಿಕೆಯನ್ನು ತಾವು ಸಲ್ಲಿಸುವ ಕೋರಿಕೆಯ ಆಧಾರದ ಮೇಲೆ ತಮಗೆ ಬಿಡುಗಡೆ ಮಾಡುವ ಅನುದಾನಗಳನ್ನು ಮೊದಲಿಗೆ ನವೀಕರಣ ವಿದ್ಯಾರ್ಥಿವೇತನಕ್ಕೆ ಬಳಸಲು ಆದ್ಯತೆ ನೀಡುವುದು. ಸದರಿ ಮೊತ್ತದಲ್ಲಿ ಅನುದಾನ ಉಳಿಕೆಯಾದಲ್ಲಿ ನೂತನ ವಿದ್ಯಾರ್ಥಿವೇತನಕ್ಕೆ ವೆಚ್ಚಮಾಡುವುದು. ಹಾಗೂ ನವೀಕರಣ ವಿದ್ಯಾರ್ಥಿವೇತನ ಪಾವತಿಗೆ ಚಾಲ್ತಿಯಲ್ಲಿರುವ ನಿಯಮಗಳನ್ನು ಕಡ್ಡಾಯವಾಗಿ ಪರಿಶೀಲಿಸಿ ಕ್ರಮಕೈಗೊಳ್ಳುವುದು.

ಹಾಗೂ ಸದರಿ ವಿದ್ಯಾರ್ಥಿವೇತನಗಳನ್ನು ಖಜಾನೆ-2 ರಲ್ಲಿ ಅರ್ಹ ಫಲಾನುಭವಿ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ಸಕಾಲದಲ್ಲಿ ಬಿಡುಗಡೆ ಮಾಡುವುದು. ಮುಂದಿನ ಕಂತಿನ ಕೋರಿಕೆ ಸಲ್ಲಿಸುವ ಪೂರ್ವದಲ್ಲಿ ಈ ಹಿಂದೆ ಬಿಡುಗಡೆಗೊಳಿಸಲಾಗುವ ಅನುದಾನದ ಬಳಕೆ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸುವುದು.

**(ಕರಡು ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)**

**ಕಾಲೇಜು ಶಿಕ್ಷಣ ನಿರ್ದೇಶಕರು (ಪ್ರ)**

5/6/18

**ಇವರಿಗೆ :**

ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ

ಪ್ರತಿ :

ಎಲ್ಲಾ ಸರ್ಕಾರಿ/ಖಾಸಗಿ ಅನುದಾನಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ – ವೆಬ್‌ಸೈಟ್ ಮೂಲಕ

2018-19ನೇ ಸಾಲಿಗೆ ಯೋಜನಾವಾರು ಸ್ವೀಕೃತಿ ಮತ್ತು ತಿರಸ್ಕೃತ ಅರ್ಜಿಗಳ ಮಾಹಿತಿಗಳು

ಅನುಬಂಧ-1

**ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು**

| ಕ್ರ.ಸಂ. | ಜಿಲ್ಲೆ ಹೆಸರು | ಸ್ವೀಕೃತಿಯಾದ ಒಟ್ಟು ಅರ್ಜಿಗಳು | ಪಾವತಿಗೆ ಅರ್ಹವಾದ ಅರ್ಜಿಗಳು | 2018-19ನೇ ಸಾಲಿಗೆ ನೂತನ/ನವೀಕರಣಕ್ಕಾಗಿ ಅಗತ್ಯವಿರುವ ಅನುದಾನದ ಕೋರಿಕೆ |
|---|---|---|---|---|
| 1 | 2 | 3 | 4 | 5 |
| | | | | |

2018-19ನೇ ಸಾಲಿಗೆ ಯೋಜನಾವಾರು ಸ್ವೀಕೃತಿ ಮತ್ತು ತಿರಸ್ಕೃತ ಅರ್ಜಿಗಳ ಮಾಹಿತಿಗಳು

ಅನುಬಂಧ-2

**ಖಾಸಗಿ ಅನುದಾನಿತ ಕಾಲೇಜುಗಳು**

| ಕ್ರ.ಸಂ. | ಜಿಲ್ಲೆ ಹೆಸರು | ಸ್ವೀಕೃತಿಯಾದ ಒಟ್ಟು ಅರ್ಜಿಗಳು | ಪಾವತಿಗೆ ಅರ್ಹವಾದ ಅರ್ಜಿಗಳು | 2018-19ನೇ ಸಾಲಿಗೆ ನೂತನ/ನವೀಕರಣಕ್ಕಾಗಿ ಅಗತ್ಯವಿರುವ ಅನುದಾನದ ಕೋರಿಕೆ |
|---|---|---|---|---|
| 1 | 2 | 3 | 4 | 5 |
| | | | | |